೬. ವಿಟ್ಲದಿಂದ ಮಂಗಳೂರಿಗೆ ವಿದ್ಯಾರ್ಥಿ, ವಿದ್ಯಾರ್ಥಿನಿಗಳಿಗೆ ರಸ್ತೆ ಸಾರಿಗೆ ಇಲಾಖೆಯವರು ರಿಯಾಯಿತಿ ಬಸ್ ಪಾಸ್ ಕೊಡುವಂತೆ ಒತ್ತಾಯ

ಶ್ರೀ ಎ. ರುಕ್ಮಯ್ಯ ಪೂಜಾರಿ(ವಿಟ್ಲ).—ಮಾನ್ಯ ಅಧ್ಯಕ್ಷರೇ, ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಇಲಾಖೆಯವರು ೪೦ ಕಿ.ಮಿ. ದೂರದವರೆಗೆ ಮಾತ್ರ ಪಾಸು ಕೊಡುತ್ತಾರೆ ಆದರೆ ಅದರಿಂದ ದೂರ ಹೋಗುವವರಿಗೆ ಇದರಿಂದ ಪ್ರಯೋಜನವಾಗುವುದಿಲ್ಲ. ಉದಾ : ಮಂಗಳೂರಿನಿಂದ ವಿಟ್ಲಕ್ಕೆ ಸುಮಾರು ೪೫ ಕಿ.ಮಿ. ದೂರವಿರುತ್ತದೆ. ವಿಟ್ಲ ಕೂಡಾ ನನ್ನ ಕ್ಷೇತ್ರದ ಕೇಂದ್ರವಾಗಿರುತ್ತದೆ, ಆದ್ದರಿಂದ ೪೫ ಕಿ.ಮಿ. ಗೆ ಟಿಕೇಟು ಕೊಡಬೇಕಾಗುತ್ತದೆ. ಮತ್ತು ಅದಕ್ಕೆ ೪೦ ಕಿ.ಮಿ. ದೂರಕ್ಕಿಂತ ಜಾಸ್ತಿ ಹಣ ತರಬೇಕಾಗುತ್ತದೆ. ಆದ್ದರಿಂದ ಎಲ್ಲಾ ಮಕ್ಕಳಿಗೆ ಅನುಕೂಲವಾಗುವ ದೃಷ್ಟಿಯಿಂದ ಬಸ್ಸಿನ ರಿಯಾಯಿತಿ ದರವನ್ನು ೪೦ ಕಿ.ಮಿ. ನಿಂದ ೫೦ ಕಿ.ಮಿ. ವರೆಗೆ ಮುಂದುವರಿಸಬೇಕಾಗಿ ಸರಕಾರದ ಗಮನಕ್ಕೆ ತರಲು ಬಯಸುತ್ತೇನೆ.

ಶ್ರೀ ಕೆ. ಜೆ. ಜಾರ್ಜ್(ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ೪೦ ಕಿಲೋ ಮೀಟರ್ ದೂರ ಪ್ರಯಾಣಿಸುವ ವಿದ್ಯಾರ್ಥಿಗಳಿಗೆ ಮಾತ್ರ ರಿಯಾಯಿತಿ ದರದಲ್ಲಿ ಪಾಸುಗಳನ್ನು ಕೊಡಲಾಗುತ್ತಿದೆ. ಈ ರೀತಿಯ ರಿಯಾಯಿತಿಯಿಂದ ಸಂಸ್ಥೆಯು ಈಗಾಗಲೇ ಸಾಕಷ್ಟು ನಷ್ಟವನ್ನು ಅನುಭವಿಸುತ್ತಿದೆ. ಮಾನ್ಯ ಸದಸ್ಯರು ಕೇಳಿರುವಂತೆ ೫೦ ಕಿಲೋ ಮೀಟರ್ ದೂರದವರೆಗೆ ರಿಯಾಯಿತಿಯನ್ನು ವಿಸ್ತರಿಸಿದರೆ ಕರ್ನಾಟಕ ರಾಜ್ಯದ ಎಲ್ಲಾ ಊರುಗಳಿಗೂ ಈ ರೀತಿಯ ರಿಯಾಯಿತಿಯನ್ನು ಕೊಡಬೇಕಾಗುವುದು. ಆದುದರಿಂದ ಸಂಸ್ಥೆಯು ಇನ್ನೂ ಹೆಚ್ಚು ನಷ್ಟವನ್ನು ಅನುಭವಿಸಬೇಕಾಗುತ್ತದೆ.

ಈಗ ಕೊಟ್ಟಿರುವ ೪೦ ಕಿಲೋಮೀಟರ್ ಮಿತಿ ಶಾಲಾ ಕಾಲೇಜುಗಳಿಗೆ ಹೋಗುತ್ತಿರುವ ವಿದ್ಯಾರ್ಥಿಗಳಿಗೆ ಅನುಕೂಲವಾಗಿರುತ್ತದೆ, ಏಕೆಂದರೆ ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲೂ ೪೦ ಕಿಲೋ ಮೀಟರ್ ಮಿತಿಯೊಳಗೆ ಶಾಲಾ ಕಾಲೇಜುಗಳು ಇರುತ್ತವೆ ಎಂತ್ತು ಬಹುತೇಕ ಸ್ಥಳಗಳಲ್ಲಿ ಕಿರಿಯ ಕಾಲೇಜುಗಳು ಮತ್ತು ಹಿರಿಯ ಕಾಲೇಜುಗಳು ಸಹ ಇರುವುದರಿಂದ ಈಗ ಕೊಟ್ಟಿರುವ ೪೦ ಕಿಲೋ ಮೀಟರ್ ಮಿತಿಯು ಸೂಕ್ತವೆಂದು ಕಂಡು ಬರುತ್ತದೆ.

ಆದುದರಿಂದ, ದೂರದ ಮಿತಿಯನ್ನು ವಿಸ್ತರಿಸಲು ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು.—ಶ್ರೀ ಪಿ. ಸಿ. ಸಿದ್ಧನಗೌಡರ್.

(ಶ್ರೀ ಪಿ. ಸಿ. ಸಿದ್ಧನಗೌಡರ್‌ರವರು ಗೈರುಹಾಜರು)

ವಿತ್ತೀಯ ಕಾರ್ಯ ಕಲಾಪಗಳು

೧೯೯೦-೯೧ನೇ ಸಾಲಿನ ಬೇಡಿಕೆಗಳ ಮಂಡನೆ ಮತ್ತು ಚರ್ಚೆ

ಸಮಾಜ ಕಲ್ಯಾಣ, ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಗಳು

ಅಭಿಯಾಚನೆ ಕ್ರಮಾಂಕ ೭–ಗಣಿಗಳು ಮತ್ತು ಭೂವಿಜ್ಞಾನ

† ಶ್ರೀ ಬಿ. ಶಿವಣ್ಣ (ಗಣಿ ಮತ್ತು ಭೂವಿಜ್ಞಾನ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಚಿವರು):—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗಣಿಗಳು ಮತ್ತು ಭೂ ವಿಜ್ಞಾನಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ಮೊತ್ತವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೪೪,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಬಿನ್ನವಿಸಿಕೊಳ್ಳುತ್ತಾ, ನಾನು ಬೇಡಿಕೆಯನ್ನು ಸಭೆಯ ಮುಂದೆ ಚರ್ಚೆಗೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು.—ಬೇಡಿಕೆಯನ್ನು ಸಭೆಯ ಮುಂದೆ ಮಂಡಿಸಲಾಯಿತು.